ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:ವಿವಾದ:85/2015-16 ದಿ:21-10-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಎರಿಸ್ವಾಮಿ ತಂದೆ: ಸಿದ್ದಪ್ಪ
ಕೆ.ಬೆಳಗಲ್ ಗ್ರಾಮ, ಸಿರುಗುಪ್ಪ ತಾಲೂಕ
2) ಸಿದ್ದಪ್ಪ ತಂದೆ: ಭೀಮಣ್ಣ
ಕೆ. ಬೆಳಗಲ್ ಗ್ರಾಮ , ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಮಲ್ಲಯ್ಯ ತಂದೆ: ಸಿದ್ದಪ್ಪ
ಕೆ. ಬೆಳಗಲ್ ಗ್ರಾಮ ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಕಂಚಗಾರ ಬೆಳಗಲ್ | 477 | 22-61 | H-55/2015-16 | 367/2015-16 |

ಪೀಠಿಕೆ:-

ಸಿರುಗುಪ್ಪ ತಾಲೂಕಿನ **ಕಂಚಗಾರ ಬೆಳಗಲ್ ಗ್ರಾಮದ** ಸ.ನಂ.477 ವಿಸ್ತೀರ್ಣ 22-61 ಎಕರೆ ಜಮೀನಿಗೆ ಸಂಭಂದಿಸಿದಂತೆ **ದಾನಪತ್ರ ಪ್ರಕಾರ ಎರಿಸ್ವಾಮಿ ತಂದೆ: ಸಿದ್ದಪ್ಪ ಕೆ.ಬೆಳಗಲ್‌ಗ್ರಾಮ ಇವರ ಹೆಸರಿನಲ್ಲಿ** ಖಾತೆಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ, ನಿಗದಿತ ಅವಧಿಯೊಳಗೆ **ಮಲ್ಲಯ್ಯ ತಂದೆ: ಸಿದ್ದಪ್ಪ ಕೆ.ಬೆಳಗಲ್ ಗ್ರಾಮ ಇವರು ದಿ: 23-01-2016 ರಂದು** ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:22-04-2016, 27-5-2016, 24-06-2016, 22-07-2016, 19-08-2016, 02-09-2016, ಮತ್ತು 16-09-2016 ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು–

ವಾದಿಗಳಾದ 1) ಎರ್ರಿಸ್ವಾಮಿ ತಂದೆ: ಸಿದ್ದಪ್ಪ ಕೆ. ಬೆಳಗಲ್ ಗ್ರಾಮ ಇವರು ಕೆ. ಬೆಳಗಲ್ ಗ್ರಾಮದ ಸ.ನಂ. 477 ವಿಸ್ತೀರ್ಣ 22–61 ಸೆಂಟ್ಸ್ ಜಮೀನು ನನ್ನ ತಂದೆಯಾದ ಸಿದ್ದಪ್ಪ ತಂದೆ: ಆದವಾನಿ ಭೀಮಣ್ಣ ಇವರಿಂದ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: 6051/15–16 ದಿ: 11–12–2015 ರಂದು ದಾನಪತ್ರ ಪ್ರಕಾರ ನೊಂದಣಿ ಮಾಡಿಕೊಂಡು ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ಮಲ್ಲಯ್ಯ ತಂದೆ: ಸಿದ್ದಪ್ಪ ಇವರು ವಿನಾಕಾರಣ ನಿರಾಧಾರವಾಗಿ ದಿ:23–1–2016 ರಂದು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಿಚಾರಣೆ ಸಂದರ್ಭದಲ್ಲಿ ಯಾವುದೇ ಪೂರಕ ದಾಖಲೆ ಪತ್ರಗಳನ್ನಾಗಲೀ ಲಿಖಿತ ಹೇಳಿಕೆಗಳನ್ನಾಗಲೀ ನೀಡಿರುವುದಿಲ್ಲ. ನಿರಾಧಾರವಾದ ತಕರಾರು ಅರ್ಜಿಯನ್ನು ತಳ್ಳಿಹಾಕಿ ಸಿರುಗುಪ್ಪ ಉಪ ನೊಂದಣಿ ಕಛೇರಿ ನೋಂದಣಿ ದಾನಪತ್ರ ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

2) ವಾದಿಗಳಾದ ಸಿದ್ದಪ್ಪ ತಂದೆ: ಭೀಮಣ್ಣ ವಾಸ: ಕೆ. ಬೆಳಗಲ್ ಗ್ರಾಮ ಇವರು ಕೆ. ಬೆಳಗಲ್ ಗ್ರಾಮದ ಸ.ನಂ. 477 ವಿಸ್ತೀರ್ಣ 22–61 ಸೆಂಟ್ಸ್ ಜಮೀನು ನನ್ನ ಮಗನಾದ ಎರ್ರಿಸ್ವಾಮಿ ತಂದೆ: ಸಿದ್ದಪ್ಪ ಇವರಿಗೆ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: 6051/15–16 ದಿ: 11–12–2015 ರಂದು ದಾನಪತ್ರ ಪ್ರಕಾರ ನೊಂದಣಿ ಮಾಡಿಕೊಂಡು ಹಕ್ಕು ಬದಲಾವಣೆ ಸಂದರ್ಭದಲ್ಲಿ ಮಲ್ಲಯ್ಯ ತಂದೆ: ಸಿದ್ದಪ್ಪ ಇವರು ದಿ:23–1–2016 ರಂದು ವಿನಾಕಾರಣ ನಿರಾಧಾರವಾಗಿ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಿಚಾರಣೆ ಸಂದರ್ಭದಲ್ಲಿ ಯಾವುದೇ ಪೂರಕ ದಾಖಲೆ ಪತ್ರಗಳನ್ನಾಗಲೀ ಲಿಖಿತ ಹೇಳಿಕೆಗಳನ್ನಾಗಲೀ ನೀಡಿರುವುದಿಲ್ಲ. ನಿರಾಧಾರವಾದ ತಕರಾರು ಅರ್ಜಿಯನ್ನು ತಳ್ಳಿಹಾಕಿ ಸಿರುಗುಪ್ಪ ಉಪ ನೊಂದಣಿ ಕಛೇರಿ ನೋಂದಣಿ ದಾನಪತ್ರ ಪ್ರಕಾರ ಎರ್ರಿಸ್ವಾಮಿ ತಂದೆ: ಸಿದ್ದಪ್ಪ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಮಲ್ಲಯ್ಯ ತಂದೆ: ಸಿದ್ದಪ್ಪ ಕೆ.ಬೆಳಗಲ್ ಗ್ರಾಮ ಇವರು ಕೆ.ಬೆಳಗಲ್ ಗ್ರಾಮದ ಸ.ನಂ.477 ವಿಸ್ತೀರ್ಣ 22–61 ಸೆಂಟ್ಸ್ ಜಮೀನು ಸಿದ್ದಪ್ಪ ತಂದೆ: ಆದವಾನಿ ಭೀಮಣ್ಣ ಇವರಿಂದ ಎರ್ರಿಸ್ವಾಮಿ ತಂದೆ: ಸಿದ್ದಪ್ಪ ಇವರಿಗೆ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: 6051/15–16 ದಿ: 11–12–2015 ರಂದು ದಾನಪತ್ರ ಪ್ರಕಾರ ನೊಂದಣಿ ಮಾಡಿಕೊಂಡು ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ದಿ:23–1–2016 ರಂದು ತಕರಾರು ಅರ್ಜಿ ಸಲ್ಲಿಸಿದ್ದು ಸದ್ರಿ ವಿಚಾರಣೆ ಸಮಯದಲ್ಲಿ ಸದ್ರಿ ಜಮೀನು ನಮ್ಮ ಜಂಟಿ ಕುಟುಂಬದ್ ಆಸ್ತಿಯಾಗಿರುತ್ತದೆ. ನನಗೆ ಮತ್ತು ನನ್ನ ಅಣ್ಣ ಸಿದ್ದಪ್ಪ ಹಾಗೂ ನಮ್ಮ ಅಕ್ಕ ತಂಗಿಯರಿಗೆ ಈ ಜಮೀನಿನ ಮೇಲೆ ಹಕ್ಕು ಇರುತ್ತದೆ. ಆದರೆ ನನ್ನ ಅಣ್ಣ ಸಿದ್ದಪ್ಪ ಈತನು ದಿ: 9–12–2015 ರಂದು ನನಗೆ ಮತ್ತು ನನ್ನ ಅಕ್ಕ ತಂಗಿಯವರಿಗೆ ಮೋಸಮಾಡುವ ಉದ್ದೇಶದಿಂದ ತಮ್ಮ ಮಗನಾದ ಎರ್ರಿಸ್ವಾಮಿಗೆ ರಿಜಿಸ್ಟರ್ ದಾನಪತ್ರ ಮಾಡಿರುವುದು ಈದಿನ ನನಗೆ ತಿಳಿದಿದೆ. ನಮ್ಮ ಅಣ್ಣನಿಗೆ ಈ ಜಮೀನಿನ ಮೇಲೆ ಸಂಪೂರ್ಣ ಹಕ್ಕು ಇರುವುದಿಲ್ಲ ಅಲ್ಲದೇ ದಾನಪತ್ರ ದಿ: 09–12–2015 ದ್ವೇಷದಿಂದ ಕೂಡಿದ್ದು ಆಗಿರುತ್ತದೆ. ಕಾನೂನಿನಡಿಯಲ್ಲಿ ಇದಕ್ಕೆ ಮಾನ್ಯತೆ ಇರುವುದಿಲ್ಲ. ನಾನು ಈಗಾಗಲೇ ದಿ: 03–06–2016 ರಂದು ವಿಭಾಗಮಾಡಿಕೊಳ್ಳಬೇಕೆಂದು ವಕೀಲರಕಡೆಯಿಂದ ನೋಟೀಸ್ ನೀಡಿರುತ್ತೇನೆ. ಕಾರಣ ತಾವುಗಳು ನಮ್ಮ ಅಣ್ಣನ ಮಗನಾದ ಎರ್ರಿಸ್ವಾಮಿ ಹೆಸರಿಗೆ ಮೇಲ್ಕಾಣಿಸಿದ ಜಮೀನು ಸ.ನಂ.477 ವಿಸ್ತೀರ್ಣ 22–61 ಎಕರೆ ಭೂಮಿಯನ್ನು ಹಕ್ಕು ಬದಲಾವಣೆ ಮಾಡಬಾರದೆಂದು ಲಿಖಿತ ಹೇಳಿಕೆನೀಡಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ, ಸದರಿ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: 6051/15–16 ದಿ:11–12–2015 ರಂದು ದಾನಪತ್ರ ಪ್ರಕಾರ ಎರ್ರಿಸ್ವಾಮಿ ತಂದೆ: ಸಿದ್ದಪ್ಪ ಇವರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಕಂಚಗೇರ ಬೆಳಗಲ್ ಗ್ರಾಮದ ಸ.ನಂ.477 ವಿಸ್ತೀರ್ಣ 22–61 ಸೆಂಟ್ಸ್ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿ ಪತ್ರ ನಂ: 6051/15–16ದಿ: 11–12–2015 ರ ನೊಂದಣಿ ದಾನಪತ್ರ ಪ್ರಕಾರ ಎರ್ರಿಸ್ವಾಮಿ ತಂದೆ: ಸಿದ್ದಪ್ಪ ಇವರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 21–10–2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ಕರೂರು
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ

ನಾಡ ಕಾರ್ಯಾಲಯ, ಕರೂರು.